

## ರೋಲ್ ಮಾಡೆಲ್

‘ಚಿನ್ನಾರಿಮುತ್ತನ ಚಂದಯಾನ’, (ಸೆ. 07, ರಘುನಾಥ ಚ.ಹ.) ಚದುರಂಗ ಕ್ರೀಡೆಯಲ್ಲಿ ಭಾರತದ ಯುವ ಪ್ರತಿಭೆಗಳ ಸಾಧನೆ ಕುರಿತ ಮುಖಪುಟ ಲೇಖನ ಓದಿ ಹೆಮ್ಮೆ ಮೂಡಿತು. ವಿಶ್ವದ ಚೆಸ್ ನಕಾಶೆಯಲ್ಲಿ ಭಾರತದ ಹೆಸರನ್ನು ಝಳಪಿಸುತ್ತಿರುವ ಇಂಥ ಪ್ರತಿಭೆಗಳು ನಕ್ಷತ್ರಗಳಂತೆ. ಮಧ್ಯಮ ವರ್ಗದಿಂದ ಬಂದು ಅಪ್ರತಿಮ ಸಾಧನೆ ಮಾಡಿದ ಪ್ರಜ್ಞಾನಂದ ಈ ಪೀಳಿಗೆಗೆ ರೋಲ್ ಮಾಡೆಲ್.

ಪ್ರಜ್ಞಾನಂದನ ಪ್ರತಿಭೆಗೆ ಬೆಂಬಲವಾಗಿ ನಿಂತ ಆತನ ಅಮ್ಮನಿಗೂ ಈ ಸಾಧನೆಯ ಯಶಸ್ಸು ಸಲ್ಲಬೇಕು. ಚೆಸ್‌ನಲ್ಲಿ ಸಾಧನೆಗೈದ, ಸಾಧನೆಯ ಹಾದಿಯಲ್ಲಿರುವ ಹಲವರ ಕುರಿತ ಈ ಲೇಖನ ಯುವಜನರಿಗೆ ಪ್ರೇರಣೆಯಂತಿದೆ.

—ಕೋಕಿಲಾ ಎಂ., ಹಾಸನ

## ಚದುರಂಗದಾಟದ ನೆನಪು...

ಚೆಸ್ ಕ್ರೀಡೆ ಕುರಿತ ಮುಖಪುಟ ಲೇಖನ ಓದಿ ನನ್ನ ನೆನಪಿನ ಸುರುಳಿ ಬಿಚ್ಚಿಕೊಂಡಿತು. ಅನೇಕ ಪುಸ್ತಕಗಳನ್ನು ಓದಿ ನಾನು ಚೆಸ್ ಅಭ್ಯಾಸ ಮಾಡಿದ್ದೆ. ಆಗ ವಿಶ್ವನಾಥನ್ ಆನಂದ್ ತುಮಕೂರಿಗೆ ಬಂದು ಆಡಿದ್ದರು. ನಾನು ಹೋಗಿ ನೋಡುವಷ್ಟರಲ್ಲಿ ಆಟ ಮುಗಿಸಿ ಹೊರಟುಹೋಗಿದ್ದರು. ನನ್ನ ಎರಡನೆಯ ಮಗ ಹೈಸ್ಕೂಲ್ ದಿನಗಳಲ್ಲಿ ಜಿಲ್ಲೆಯ ಚಾಂಪಿಯನ್ ಆಗಿದ್ದ. ಪ್ರಪ್ರಥಮ ಬಾರಿಗೆ ನಾನು ಯುವಜನರ ಚೆಸ್ ಸ್ಪರ್ಧೆಯನ್ನು ತುಮಕೂರಿನ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದೆ. ಆಗ ಈಗಿನ ಕರ್ನಾಟಕದ ಗ್ರ್ಯಾಂಡ್ ಮಾಸ್ಟರ್ ತೇಜ್ ಕುಮಾರ್ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದರು.

ನಾನು ಮತ್ತು ನನ್ನ ಮಗ ಕಾಲೇಜಿನಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ವಿಭಾಗಗಳಲ್ಲಿ ಕ್ರಮವಾಗಿ ಚಾಂಪಿಯನ್‌ಗಳಾಗಿದ್ದೆವು! ಲೇಖನ ಓದುತ್ತಾ ಓದುತ್ತಾ ಈ ನೆನಪುಗಳು ಮರುಕಳಿಸಿದವು.

ವಿಶ್ವ ಚೆಸ್ ನಕಾಶೆಯಲ್ಲಿ ಭಾರತದ ಯುವ ಪ್ರತಿಭೆಗಳನ್ನು ಕಂಡು ಹೆಮ್ಮೆ ಮೂಡಿತು.

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

## ಮನಸ್ಸಿನ ಕನ್ನಡಿ

‘ಸಾಂಗತ್ಯ’ (ಸೆ. 07, ಸಿ.ಎನ್. ಮುಕ್ತಾ) ಕಥೆ ಬಹಳ ಸುಂದರವಾಗಿದೆ. ಈ ಕಥೆ ನಮ್ಮ ಮನೆ ಮತ್ತು ಮನಸ್ಸುಗಳಿಗೆ ಕನ್ನಡಿ ಹಿಡಿದಂತಿತ್ತು. ತಾಯಿ ಮತ್ತು ಅತ್ತೆಯ ಸ್ಥಾನವನ್ನು ನಿಭಾಯಿಸುವ ರೀತಿ ಕಥೆಯಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

—ಗಾಯತ್ರಿ ವೆಂಕಟೇಶ್, ಮೈಸೂರು

## ಸುಂದರ ಬಿಂಬ

ಈಗಿನ ಜೀವನಶೈಲಿ, ಒತ್ತಡದ ಬದುಕಿನ ತೊಳಲಾಟಗಳನ್ನು ‘ಸಾಂಗತ್ಯ’ ಕಥೆಯಲ್ಲಿ ಸುಂದರವಾಗಿ ಬಿಂಬಿಸಿದ್ದಾರೆ. ಅತ್ತೆಯ ಹಿತನುಡಿಗಳು ಸಂಸಾರಕ್ಕೆ ದಾರಿದೀಪ. ಈ ಅತ್ತೆಯಂಥವರು ಸಮಾಜಕ್ಕೆ ಅವಶ್ಯಕ.

—ಸಿ. ಸರಳಾಮಣಿ, ಮೈಸೂರು



## ಸಂದೇಶ ದೊಡ್ಡದು

ಚಿಕ್ಕ ಕಥೆಯಲ್ಲಿ ದೊಡ್ಡ ಸಂದೇಶ ಅಡಗಿದೆ. ಬದುಕನ್ನು ಅರಿಯಬೇಕಾದ ರೀತಿಯನ್ನು ತಿಳಿಸಿದೆ. ಸಂಬಂಧಗಳ ಮೌಲ್ಯವನ್ನು ಎತ್ತಿಹಿಡಿದ ಸಹಜ, ಸರಳ ಕಥೆ ಓದಿ ಮೆಚ್ಚುಗೆಯಾಯಿತು.

—ರಾಜೇಶ್ ಕೆ., ಚಿಕ್ಕಮಗಳೂರು

## ಕುತೂಹಲಕರ ‘ಆಪರೇಷನ್ ಅಮ್ಮು’

‘ಆಪರೇಷನ್ ಅಮ್ಮು’ (ಮೋಹನ್ ಪ್ರಸಾದ್) ಧಾರಾವಾಹಿ ತುಂಬಾ ಕುತೂಹಲಕಾರಿಯಾಗಿ ಸಾಗುತ್ತಿದೆ. ಪೊಲೀಸ್ ತನಿಖೆಯ ಇಂಚಿಂಚು ಮಾಹಿತಿಯನ್ನೂ ನೀಡಿರುವುದು ಧಾರಾವಾಹಿಯ ತೂಕ, ನಿಖರತೆ ಹೆಚ್ಚಿಸಿದೆ. ಒಂದು ಕೊಲೆಯ ಸುತ್ತ ನಡೆಯುವ ತನಿಖೆ, ಕಥೆಗಳು ಆಸಕ್ತಿ ಹುಟ್ಟಿಸುವಂತಿವೆ.

—ಬ್ರಹ್ಮಕುಮಾರ್, ಕೊಡಗು

## ಅಡುಗೆಗೆ ಒಲಿದ ಹೆಂಡತಿ!

‘ಅಡುಗೆ ಒಲ್ಲದ ಗಂಡ’ (ಸೆ. 07, ಮಣ್ಣೆರಾಜು) ಮಂದಹಾಸ ಲೇಖನ ಬಹಳ ಚೆನ್ನಾಗಿದೆ. ಗಂಡನಿಗೆ ಅಡುಗೆ ಕಲಿಸಲೇಬೇಕೆಂಬ ಹೆಂಡತಿಯ ಹಟ, ಆಕೆಯ ಪಡಿಪಾಡಲು ಹಾಗೂ ಅದಕ್ಕಾಗಿ ಗಂಡನ ಸರ್ಕಸ್ ಓದಿ ನಗು ಬಂದಿತು. ಕೊನೆಗೆ, ಶಂಕ್ರಿ ಮಾಡಿದ ಪ್ಲಾನ್, ಅದನ್ನು ನಂಬಿದ ಸುಮಿ ಕಂಡು ಇನ್ನಷ್ಟು ನಗು ಮೂಡಿತು.

—ನಾಗರಾಜ ಎಂ., ಬೆಂಗಳೂರು

## ಮನತುಂಬಿದ ಸುರಗಿಯ ಘಮಲು

‘ಸುರಗಿ; ಮಲೆನಾಡಿಗರ ಎದೆಯ ಹಾಡು’ (ಸೆ. 07, ಶಾಂತಾ ಜಯಾನಂದ) ಲೇಖನ ಹೃದಯಸ್ಪರ್ಶಿಯಾಗಿತ್ತು. ಸುರುಳಿ ಸುರುಳಿಯಾಗಿ ಸುರಗಿಯೊಂದಿಗಿನ ನೆನಪು ಬಿಡಿಸಿಕೊಂಡಿತು. ನಾನು ಕನ್ನಡ ಪಾಠ ಮಾಡುವಾಗ ಸಂದರ್ಭೋಚಿತವಾಗಿ ವಿದ್ಯಾರ್ಥಿಗಳಿಗೆ ಸುರಗಿ ಹೂವನ್ನು ತೋರಿಸಬೇಕೆಂದು ಪ್ರಯತ್ನಿಸಿದ್ದೇನೆ. ಶಿವಮೊಗ್ಗ ಇರಲಿ, ಸಾಗರದಲ್ಲಿ ಕೇಳಿದರೂ ಈಗೆಲ್ಲಾ ಸುರಗಿ ಬರೋದೆಯಿಲ್ಲ ಅಂತಾರೆ. ನಾವು ಸಣ್ಣವರಿದ್ದಾಗ ಸುರಗಿ ಹೂವಿನ ಮಾಲೆಯನ್ನು ಹೇರ್‌ಪಿನ್‌ಗೆ ಸಿಕ್ಕಿಸಿ ಶಾಲೆಗೆ ಹೋಗುವಾಗ ಮುಡಿಯೋದು, ಮತ್ತೆ ಸಂಜೆ ತೆಗೆದಿಡೋದು ಹೀಗೆ ತಿಂಗಳಾನುಗಟ್ಟಲೆ ಹೆಮ್ಮೆಯಿಂದ ಜಡೆಯೊಂದಿಗೆ ಸುರಗಿ ಜೊತೆಯಾಗಿರುತ್ತಿತ್ತು. ಆ ಸುವಾಸನೆಯ ಘಮಲು ಮನದಲ್ಲಿ ಹಾಗೇ ಇದೆ. ಆದರೆ ಈ ಹೂವು ಕಂಡು ಅದೆಷ್ಟೋ ವರ್ಷಗಳಾಗಿ ಹೋಗಿವೆ.

—ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ



## ಘಮಘಮಿಸುವ ಸುಂದರಿ

ಸುರಗಿ, ನೀನೆಷ್ಟು ಬೆಡಗಿ. ನಿನ್ನ ಮುಡಿದು ಐವತ್ತು ವರ್ಷಗಳೇ ಸಂದಿವೆ. ಹೇಗೆ ಮತ್ತೆ ಪಡೆಯಲಿ ನಿನ್ನ... ಘಮಘಮಿಸುವ ಸುಂದರಿ...

—ಸುಜಾತಾ ಜಿ.ವಿ.

## ಚೇತೋಹಾರಿ ಚಿತ್ರಣ

‘ನಿಸರ್ಗ ಬರೆದ ಕಾರ್ಲಾ ಕಾವ್ಯ’ (ಆ. 31, ಪ್ರಸಾದ್ ಶೆಣೈ ಆರ್.ಕೆ.), ಕಾರ್ಲಾ ಗುಹೆಗಳ ಕುರಿತ ಪ್ರವಾಸ ಕಥನ ಚೇತೋಹಾರಿಯಾಗಿದೆ. ಲೋಣಾವಲಾದ ಹಸುರು ಪರಿಸರ, ಅದರ ನಡುವೆ ಆಕರ್ಷಣೆಯ ಬಿಂದುವಾಗಿರುವ ಕಾರ್ಲಾ ಗುಹೆಯ ಕಲಾತ್ಮಕತೆ ಲೇಖನದಲ್ಲಿ ತುಂಬಾ ಚೆನ್ನಾಗಿ ಚಿತ್ರಿತವಾಗಿದೆ.

— ಉಮಾದೇವಿ ಎಂ., ನೆಲಮಂಗಲ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in